ದಿಃ09.03.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿ ಪರ ಶ್ರೀ ಪಿ.ವಿ.ಜೆಡ್. ವಕೀಲರಿಂದ ,**

17. ನಾನು ಪ್ರತಿವಾದಿಗಳಿಗೆ ನೋಟೀಸ್ ಅನ್ನು ನೀಡಿರುವುದಿಲ್ಲ. ಈ ದಾವೆಯನ್ನು ಹೂಡುವ ಮೊದಲು ಪ್ರತಿವಾದಿಗಳಿಗೆ ನೋಟೀಸ್ ಅನ್ನು ನಿಪಿ 5 ರಂತೆ ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಅವರಿಗೆ ಹೇಳಿದ್ದೆ. ನನ್ನ ಪ್ರಮಾಣ ಪತ್ರದಲ್ಲಿ ಮೌಖಿಕವಾಗಿ ಅವರಿಗೆ ಕೇಳಿರುವ ಬಗ್ಗೆ ನಾನು ಹೇಳಿರುವುದಿಲ್ಲ. ನಾನು ನೊಂದಣಿ ಕಚೇರಿಯಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದ ನೊಂದಣಿ ಮಾಡಿಸಲು ಯಾವುದೇ ಟೋಕನ್ ಪಡೆದಿರುವುದಿಲ್ಲ. ಆ ಸಮಯದಲ್ಲಿ ವಾದಿಯವರಿಗೆ ಸಂಬಂಧಿಸಿದಂತೆ ಯಾವುದೇ ಸ್ಟಾಂಪ್ ಪೇಪರ್ ಅನ್ನು ಖರೀದಿಸಿರುವುದಿಲ್ಲ. ನಾನು ಕರಾರು ಪತ್ರದಲ್ಲಿ ಹೇಳಿರುವ ಹಾಗೇ ಯಾವತ್ತಿಗೂ ನನ್ನ ಪರ ಒಪ್ಪಂದ ಮುಂದುವರಿಸಲು ಸಿದ್ಧ ಮತ್ತು ಇಚ್ಛೆ ಹೊಂದಿರಲಿಲ್ಲ ಎಂದರೆ ಸುಳ್ಳು.

18. ದಿಃ 19-01-1991 ರಂದು 1 ನೇ ಪ್ರತಿವಾದಿಯವರಿಗೆ ದಾವಾ ಸ್ವತ್ತು ಮಂಜೂರಾಗಿತ್ತು ಎಂದರೆ ಸರಿ. ನಿಪಿ 3 ರಲ್ಲಿ 15 ವರ್ಷ ಪರಭಾರೆ ಅವಧಿ ಮುಗಿದ ಕೂಡಲೇ ಪ್ರತಿವಾದಿಗಳು ತಮ್ಮ ಸ್ವಂತ ಖರ್ಚಿನಿಂದ ಕ್ರಯ ನೊಂದಣಿ ಮಾಡಿಸಬೇಕು ಎಂದು ಬರೆಯಲಾಗಿದೆ ಎಂದರೆ ಸರಿ. ಅದೇ ರೀತಿ ನಿಪಿ 4 ರಲ್ಲಿ ಯೂ ಸಹ ಪರಭಾರೆ ಅವಧಿ ಮುಗಿದ ಕೂಡಲೇ ಕ್ರಯ ಪತ್ರ ಮಾಡಿಕೊಡಬೇಕೆಂದು ಒಪ್ಪಿ ಬರೆಯಲಾಗಿತ್ತು ಎಂದರೆ ಸರಿ. ಸದರಿ ಅವಧಿ ದಿಃ 18-01-2014 ರಂದು ಮುಕ್ತಾಯವಾಗಿರುತ್ತದೆ ಎಂದರೆ ಸರಿ. ದಿಃ 18-01-2014 ರಿಂದ 09-11-2017 ರಂದು ನಿಪಿ 5 ರಂತೆ ನೋಟೀಸ್ ನೀಡುವ ಮೊದಲು ನಾವು ಪ್ರತಿವಾದಿಗಳಿಗೆ ಲಿಖಿತ ರೂಪದಲ್ಲಿ ಕ್ರಯಪತ್ರವನ್ನು ಮಾಡಿಕೊಡಲು ನೋಟೀಸ್ ನೀಡಿರುವುದಿಲ್ಲ, ಆದರೆ ಮೌಖಿಕವಾಗಿ

ಕೇಳಿಕೊಳ್ಳುತ್ತಿದ್ದೆವು. ನಾನು ಮೌಖಿಕವಾಗಿ ಕ್ರಯ ಪತ್ರ ಮಾಡಿಕೊಡಲು ಪ್ರತಿವಾದಿಗಳಿಗೆ ಕೇಳಿರುವುದಿಲ್ಲ ಎಂದರೆ ಸುಳ್ಳು.

19. 1 ನೇ ಪ್ರತಿವಾದಿಯವರು ಅಸಲು ದಾವೆ 191/2017 ಅನ್ನು ನಿಪಿ 5 ಅನ್ನು ನಾವು ನೀಡುವ ಮೊದಲೇ ದಾಖಲಿಸಿದ್ದರು ಎಂದರೆ ಸರಿ. ದಿಃ21-06-2017 ರಂದು ಸದರಿ ದಾವೆಯಲ್ಲಿ ನಾವು ಹಾಜರಾದ ಮೇಲೆ ನಿಪಿ 5 ನೋಟೀಸ್ ಅನ್ನು ಕಳುಹಿಸಿರುತ್ತೇವೆ ಎಂದರೆ ಸರಿ. ಕರಾರು ಪತ್ರದಂತೆ ಪೂರ್ತಿ ಕ್ರಯದ ಹಣವನ್ನು ಪಾವತಿಸಿರಲಿಲ್ಲ ಇನ್ನೂ ಬಾಕಿ ಹಣವನ್ನು ಕೊಡುವುದು ಇತ್ತು ಎಂದರೆ ಸರಿ. ಕರಾರು ಪತ್ರದಲ್ಲಿ ಕ್ರಯ ಪತ್ರ ಮಾಡುವ ಮೊದಲು ಎನ್.ಒ.ಸಿ ತರಬೇಕು ಎಂದು ಬರೆಯಲಾಗಿದೆ ಎಂದರೆ ಸರಿ. ಅದೇ ರೀತಿ ಸಾಲ ಅಥವಾ ಯಾವುದೇ ಋಣಭಾರ ಇದ್ದರೆ ತೀರಿಸಬೇಕು ಎಂದು ಬರೆಯಲಾಗಿದೆ ಎಂದರೆ ಸರಿ. ನಿಪಿ 3 ರಲ್ಲಿ ರೂ. 50,000/- ಹಣವನ್ನು ನೀಡಿದ ಬಗ್ಗೆ ಷರಾ ಬರೆಯಲಾಗಿದೆ ಎಂದರೆ ಸರಿ. ಪ್ರತಿಯೊಂದು ವಿಷಯದ ಬಗ್ಗೆ ನಿಖರವಾಗಿ 2 ಕರಾರು ಪತ್ರಗಳು ನಿಪಿ 3 ಮತ್ತು ನಿಪಿ 4 ರಲ್ಲಿ ಬರೆಯಲಾಗಿದೆ ಎಂದರೆ ಸರಿ. ನಿಪಿ 3 ಮತ್ತು ನಿಪಿ 4 ರಲ್ಲಿ ಪ್ರತಿವಾದಿಗಳು ನಮಗೆ ಸ್ವಾಧೀನ ಬಿಟ್ಟುಕೊಟ್ಟ ಬಗ್ಗೆ ಬರೆದಿರುವುದಿಲ್ಲ ಎಂದರೆ ಸರಿ. ನಿಪಿ 3 ರಲ್ಲಿ ರೂ. 50,000/- ಹಣ ನೀಡಿ ಷರಾ ಬರೆದ ದಿನ ಪಂಚಾಯತಿದಾರರ ಸಮಕ್ಷಮ ಪ್ರತಿವಾದಿಗಳು ನಮಗೆ ಸ್ವಾಧೀನ ನೀಡಿರುತ್ತಾರೆ. ದಿಃ 15-06-2011 ರಂದು ಬರೆದ ಷರಾದಲ್ಲಿ ಸ್ವಾಧೀನ ಬಿಟ್ಟುಕೊಟ್ಟಿರುವ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಸ್ವಾಧೀನವನ್ನು ಪ್ರತಿವಾದಿಗಳು ನಮಗೆ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20.ಅಸಲು ದಾವೆ 191/2017 ರಲ್ಲಿ ದಿಃ 20-03-2018 ರಂದು ನ್ಯಾಯಾಲಯ ನಾವು ಪ್ರತಿವಾದಿಗಳ ಜಮೀನಿನಲ್ಲಿ ತೊಂದರೆ ಕೊಡಬಾರದು ಎಂದು ಆದೇಶ ಆಗಿತ್ತು

ಎಂದರೆ ಗೊತ್ತಿಲ್ಲ. ಈ ಕುರಿತು 3 ನೇ ಪ್ರತಿವಾದಿಗಳು ದಿಃ 04-07-2019 ರಂದು ನಾವು ಅವರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದು ಪೋಲೀಸರಿಗೆ ದೂರನ್ನು



ನೀಡಿದ್ದರು ಎಂದರೆ ಗೊತ್ತಿಲ್ಲ. ಪೋಲೀಸರು ಸದರಿ ದೂರಿನ ಮೇರೆಗೆ ನಮ್ಮನ್ನು ಕರೆಯಿಸಿ ವಿಚಾರಿಸಿ ಪ್ರತಿವಾದಿಗಳ ಸ್ವಾಧೀನದಲ್ಲಿ ತೊಂದರೆ ಕೊಡಬಾರದು ಎಂದು ಹೇಳಿದ್ದರು ಎಂದರೆ ಸರಿಯಲ್ಲ. ದಿಃ 22-12-2020 ರಂದು 1 ನೇ ಪ್ರತಿವಾದಿ ಕೂಡ ಪೋಲೀಸರಿಗೆ ಒಂದು ದೂರನ್ನು ನೀಡಿದ್ದರು ಎಂದರೆ ಸುಳ್ಳು. ಆಗ ಪೋಲೀಸರು ನಮ್ಮನ್ನು ಕರೆಯಿಸಿ ವಿಚಾರಣೆ ಮಾಡಿದ ಮೇಲೆ ನಾವು ತೊಂದರೆ ಮಾಡುವುದಿಲ್ಲ ಎಂದು ಹೇಳಿದ್ದಕ್ಕೆ ಪೋಲೀಸರು ಪ್ರತಿವಾದಿಗಳಿಗೆ ಹಿಂಬರಹ ನೀಡಿರುತ್ತಾರೆ ಎಂದರೆ ಸುಳ್ಳು.

21.ದಿಃ 20-01-2020 ರಂದು ನಾನು 3 ರಿಂದ 5 ನೇ ಪ್ರತಿವಾದಿಗಳ ವಿರುದ್ಧ ಪೋಲೀಸರಲ್ಲಿ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿ. ನಾನು ಪ್ರತಿವಾದಿಗಳ ವಿರುದ್ದ ನೀಡಿರುವ ದೂರಿನ  ದೃಢಿಕೃತ ನಕಲನ್ನು ನೋಡಿ ಗುರುತಿಸುತ್ತೇನೆ ಸದರಿ ದೂರಿನ ದೃಢಿಕೃತ ನಕಲನ್ನು ನಿಡಿ 1 ಎಂದು ಗುರುತಿಸಲಾಯಿತು. ಸದರಿ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿ ದಾಖಲಾಗಿ ಅಂತಿಮ ವರದಿಯನ್ನು ಪೋಲೀಸರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅಂತಿಮ ವರದಿಯನ್ನು ನಿಡಿ 2 ಎಂದು ಗುರುತಿಸಲಾಯಿತು. ಅದೇ ದಿನ  5 ನೇ ಪ್ರತಿವಾದಿಯವರು ನನ್ನ ಹಾಗೂ ಇತರೆ 7 ಜನರ ವಿರುದ್ಧ ದೂರನ್ನು  ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದೂರಿನ ಆಧಾರದ ಮೇಲೆ ಪ್ರಥಮ ವರ್ತಮಾನ ವರದಿಯನ್ನು ಪೋಲೀಸರು ದಾಖಲಿಸಿಕೊಂಡು ತನಿಖೆ ಪೂರ್ಣಗೊಳಿಸಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ 3 ರಿಂದ 5 ಎಂದು ಗುರುತಿಸಲಾಯಿತು. ಸದರಿ ಗಲಾಟೆಯು ದಾವಾ ಸ್ವತ್ತಿಗೆ ಸಂಬಂಧಿಸಿದ್ದಂತೆ ಆಗಿರುತ್ತದೆ ಎಂದರೆ ಸರಿ. ಗಲಾಟೆ ಆದ ದಿನ ನಾವು ಪ್ರತಿವಾದಿಯವರ ಸ್ವಾಧೀನಕ್ಕೆ ಬರಬಾರದು ಎಂದು ನ್ಯಾಯಾಲಯದ ಆದೇಶ ಇತ್ತು ಎಂದರೆ ಸುಳ್ಳು. 2011 ರಿಂದ ದಾವಾ ಸ್ವತ್ತಿನ

ಸ್ವಾಧೀನದಲ್ಲಿ ನಾವು ಇರುತ್ತೇವೆ. ದಾವಾ ಸ್ವತ್ತಿನ ಸ್ವಾಧೀನ ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ.



22. ದಾವಾ ಸ್ವತ್ತನ್ನು ಖರೀದಿ ಮಾಡುವ ಮೊದಲು ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ನಾವು ನೋಡಿರುವುದಿಲ್ಲ, ಪ್ರತಿವಾದಿಗಳ ಬಗ್ಗೆ ಊರಿನಲ್ಲಿ ಒಳ್ಳೆಯ ಭಾವನೆ ಇದ್ದ ಕಾರಣ ವಿಶ್ವಾಸ ಇಟ್ಟು ಕರಾರು ಮಾಡಿಕೊಂಡಿದ್ದೆವು. 2014 ರ ನಂತರ ಕೂಡ ಪ್ರತಿವಾದಿಗಳಿಗೆ ನಾವು ದಾವಾ ಸ್ವತ್ತಿನ ದಾಖಲೆ ಬಗ್ಗೆ ಕೇಳುತ್ತಿದ್ದೆವು. ದಾವಾ ಸ್ವತ್ತಿನ ಸರ್ವೆ ಸ್ಕೆಚ್ ತಯಾರಿಸಲು ತಡವಾಗುತ್ತದೆ ಎಂದು ನಮಗೆ ತಿಳಿದಿತ್ತು ಆದರೆ ಸರ್ವೆ ಸ್ಕೆಚ್ ಆಗುವುದಿಲ್ಲ ಎಂದು ಹೇಳಿರುವುದಿಲ್ಲ. ಸರ್ವೆ ಸ್ಕೆಚ್ ತಡವಾಗುತ್ತದೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

23. ಕರಾರು ಪತ್ರದಲ್ಲಿ ಹೇಳಿರುವ ಪೂರ್ತಿ ಮೊತ್ತವನ್ನು ಪ್ರತಿವಾದಿಗಳಿಗೆ ನೀಡದೇ ಇದ್ದುದ್ದಕ್ಕೆ ಅವರು ನಮಗೆ ದಾವಾ ಸ್ವತ್ತಿನ ಸ್ವಾಧೀನವನ್ನು ನೀಡಿರುವುದಿಲ್ಲ ಎಂದರೆ ಸುಳ್ಳು. ಆದುದರಿಂದ ನನ್ನ ಹತ್ತಿರ ಸ್ವಾಧೀನಕ್ಕೆ ಸಂಬಂಧಿಸಿದ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಾವು ಪಡೆದಿರುವಂತಹ ಮುಂಗಡ ಹಣವನ್ನು ಇವತ್ತಿಗೂ ವಾಪಸ್ಸು ಮಾಡಲು ಬದ್ಧರಿರುತ್ತಾರೆ ಎಂದರೆ ಸರಿಯಲ್ಲ. ಯಾವ ದಿನಾಂಕದಂದು ಮತ್ತು ಯಾವ ದಿನದಂದು ವಾದಿಯವರು ಪ್ರತಿವಾದಿಯವರಿಗೆ ಕ್ರಯ ಪತ್ರವನ್ನು ಮಾಡಿಕೊಡಲು ಕೇಳಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ.

24. ನನ್ನ ತಂದೆಗೆ 4 ಜನ ಮಕ್ಕಳು ಇರುತ್ತಾರೆ. ಇಬ್ಬರು ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಇಬ್ಬರು ಹೆಣ್ಣು ಮಕ್ಕಳ ಮದುವೆ ಆಗಿ ಅವರು ತಮ್ಮ ಗಂಡನ ಮನೆಯಲ್ಲಿ ಇರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಪಂಚಾಯತಿ ಕಚೇರಿಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು ಈಗ ರಾಜೀನಾಮೆ ನೀಡಿರುತ್ತಾರೆ. ನಮಗೆ 3 ಎಕರೆ ಅಡಿಕೆ ತೋಟ ಇರುತ್ತದೆ ಎಂದರೆ ಸರಿ. ನಮ್ಮ

ಜಮೀನಿನ ಅಂದಾಜು ಬೆಲೆ ಈಗ ಎಷ್ಟು ಇದೆ ಎಂದು ಗೊತ್ತಿಲ್ಲ. ಪ್ರತಿವಾದಿಗಳ ಜಮೀನಿನ ಈಗಿನ ಬೆಲೆ ಗೊತ್ತಿರುವುದಿಲ್ಲ. ನಮ್ಮ ಜಮೀನು ಹಾಗೂ ಪ್ರತಿವಾದಿಗಳ ಜಮೀನು ಹತ್ತಿರದಲ್ಲಿಯೇ ಇರುತ್ತದೆ. ಸರ್ವೆ ನಂಬರ್ 17/2 2 ಎಕರೆ ಜಮೀನು



ನಮ್ಮ ತಂದೆಯ ಸ್ವಂತ ಜಮೀನು ಇರುತ್ತದೆ. ಸರ್ವೆ ನಂಬರ್ 7 ರಲ್ಲಿ 20 ಗುಂಟೆ ಜಮೀನು 2 ನೇ ವಾದಿಯವರ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ್ 6 ರಲ್ಲಿ 20 ಗುಂಟೆ ಜಮೀನು 2 ನೇ ವಾದಿಯವರ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ್ 29 ರಲ್ಲಿ 20 ಗುಂಟೆ ಹಾಗೂ 29 ಗುಂಟೆ ಜಮೀನು ನಮ್ಮ ಕುಟುಂಬಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿ. ಸದರಿ ಜಮೀನುಗಳನ್ನು ನಮ್ಮ ತಂದೆ ಖರೀದಿಸಿರುತ್ತಾರೆ. ಸರ್ವೆ ನಂಬರ್ 42 ರಲ್ಲಿ 1 ಎಕರೆ ಜಮೀನನ್ನು ನನ್ನ ತಂದೆ ಖರೀದಿಸಿರುತ್ತಾರೆ. ಸರ್ವೆ ನಂಬರ್ 40/120 ರಲ್ಲಿ 36 ಗುಂಟೆ ಜಮೀನನ್ನು ನನ್ನ ತಂದೆ ಖರೀದಿಸಿರುತ್ತಾರೆ ಈ ಎಲ್ಲಾ ಮೇಲೆ ಹೇಳಿದ ಜಮೀನುಗಳನ್ನು ಕರಾರು ಪತ್ರದ ಮೂಲಕ ಖರೀದಿಸಿರುತ್ತೇವೆ.

25. ದಾವಾ ಸ್ವತ್ತು ನಮಗಿಂತ ಜಾಸ್ತಿ ಪ್ರತಿವಾದಿಗಳಿಗೆ ಅವಶ್ಯಕತೆ ಇರುತ್ತದೆ ಎಂದರೆ ಸುಳ್ಳು. 2 ನೇ ಪ್ರತಿವಾದಿಯವರು ಪ್ರತ್ಯೇಕ ವಾಸಿಸುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯವರು ಪ್ರತ್ಯೇಕ ವಾಸಿಸುತ್ತಿದ್ದು 3 ರಿಂದ 5 ನೇ ಪ್ರತಿವಾದಿಗಳು ಒಟ್ಟಿಗೆ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯವರು ಸೈನ್ಯದಿಂದ ನಿವೃತ್ತಿ ಹೊಂದಿ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3 ಮತ್ತು 4 ನೇ ಪ್ರತಿವಾದಿಗಳು ರಸ್ತೆಯ ಮೇಲೆ ಮೀನು ವ್ಯಾಪಾರ ಮಾಡುತ್ತಾರೆ ಎಂದರೆ ಸರಿಯಲ್ಲ, ಅವರು ತೋಟ ಮಾಡುತ್ತಾರೆ. 3 ರಿಂದ 5 ನೇ ಪ್ರತಿವಾದಿಯವರಿಗೆ ದಾವಾ ಸ್ವತ್ತನ್ನು ಹೊರತು ಪಡಿಸಿ ಬೇರೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ.

26. ದಿಃ 27-11-2017 ರಂದು ಬಾಕಿ ರೂ. 1,00,000/- ಹಣ ನಮ್ಮ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ನಿರ್ವಹಿಸಲು ನಾವು ಸಿದ್ಧರಿರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಕಾಲಮಿತಿ ಮುಗಿದ ನಂತರ ದಾಖಲಿಸಿದ್ದೇವೆ

ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಅವಶ್ಯಕತೆ ನಮಗಿಂತ ಪ್ರತಿವಾದಿಗಳಿಗೆ ಅವಶ್ಯಕತೆ ಇರುತ್ತದೆ ಎಂದರೆ ಸರಿಯಲ್ಲ. ಈವತ್ತಿಗೂ ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದು ನಾವು ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು



ಪೋಲೀಸರಿಂದ ಅವರ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಇವತ್ತಿಗೂ ಪ್ರತಿವಾದಿಗಳೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಕೆ.ಇ.ಬಿ ಕಂಬ ಬಿದ್ದಾಗ ಪ್ರತಿವಾದಿಗಳೇ ಅದನ್ನು ದುರಸ್ಥಿಗೊಳಿಸಿರುತ್ತಾರೆ ಎಂದರೆ ಸುಳ್ಳು.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,***
***ಭದ್ರಾವತಿ.***